ಅ) ಹುಮ್ನಾಬಾದ್ ಮತಕ್ಷೇತ್ರ ವ್ಯಾಪ್ತಿಯಲ್ಲಿ ಮೀನುಗಾರಿಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳು ಸಮಯಕ್ಕೆ ಸರಿಯಾಗಿ ಫಲಾನುಭವಿಗಳಿಗೆ ದೊರಕುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹುಮ್ನಾಬಾದ್ ಮತಕ್ಷೇತ್ರಕ್ಕೆ ಬಸವಕಲ್ಯಾಣ ತಾಲ್ಲೂಕಿನ ಕೆಲವು ಹಳ್ಳಿಗಳು ಸೇರ್ಪಡೆಯಾಗಿದ್ದು 2008 ರಿಂದ 2011ರವರೆಗೆ ಮೀನುಗಾರಿಕೆ ಇಲಾಖೆಯಿಂದ ಹುಮ್ನಾಬಾದ್ ತಾಲ್ಲೂಕಿಗೆ ಕೇವಲ ಐದು ಆಶ್ರಯ ಮನೆಗಳನ್ನು ಮಂಜೂರು ಮಾಡಿರುವುದು ತುಂಬಾ ಕಡಿಮೆಯಾಗಿರುವುದರಿಂದ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡಲಾಗುವುದೇ;

ಇ) ಮೀನುಗಾರರಿಗೆ ಮೀನು ಹಿಡಿಯಲು ಜಾಲಿಗೆ (ಬಲೆ) ಕೊಡುವುದು ಖಚಿತವೆ; ಹಾಗಿದ್ದಲ್ಲಿ ಎಂದು ಹಾಗೂ ಎಷ್ಟು ನೀಡಲಾಗುವುದು? (ವಿವರ ನೀಡುವುದು);

ಶ್ರೀ ಆನಂದ ವಸಂತ ಆಸ್ನೋಟಿಕರ್ (ಹುಮ್ನಾಬಾದ್):– (ಮೀನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–

ಅ) ಹೌದು.

ಆ) ಹುಮ್ನಾಬಾದ್ ಮತಕ್ಷೇತ್ರಕ್ಕೆ 2008–09ರಲ್ಲಿ 4, 2009–10ರಲ್ಲಿ 4 ಹಾಗೂ 2011–12ರಲ್ಲಿ 5 ಮನೆಗಳು ಹೀಗೆ ಒಟ್ಟು 13 ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಮುಂದೆ ಮನೆಗಳ ಲಭ್ಯತೆ ಮೇರೆಗೆ ಹೆಚ್ಚುವರಿ ಮನೆಗಳನ್ನು ನೀಡಲು ಪರಿಗಣಿಸಲಾಗುವುದು.

ಇ) ಹೌದು.

2011–12ನೇ ಸಾಲಿಗೆ ಹುಮ್ನಾಬಾದ್ ಮತಕ್ಷೇತ್ರಕ್ಕೆ 29 ಮೀನುಗಾರರಿಗೆ ರೂ. 5000–00 ದಂತೆ ಬಲೆ ವಿತರಿಸಲು ರೂ. 1.45 ಲಕ್ಷಕ್ಕೆ ಮಂಜೂರಾತಿ ನೀಡಲಾಗಿದ್ದು ಶೀಘ್ರದಲ್ಲಿ ಖರೀದಿಸಿ ವಿತರಿಸಲಾಗುವುದು.

ಪುರಸಭೆಗೆ ಅನುದಾನ ಬಿಡುಗಡೆ

294 (481) ಶ್ರೀ ರಾಜಶೇಖರ ಬಸವರಾಜ ಪಾಟೀಲ್:– (ಹುಮ್ನಾಬಾದ್):– ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹುಮ್ನಾಬಾದ್ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎರಡು ಪುರಸಭೆಗಳಿದ್ದು ಹುಮ್ನಾಬಾದ್ ಮತ್ತು ಚಿಟಗುಪ್ಪಾ ಇವುಗಳಿಗೆ ಎಸ್‌ಎಫ್‌ಸಿ ಮುಕ್ತನಿಧಿ ಮತ್ತು 12ನೇ ಫೈನಾನ್ಸ್ ಯೋಜನೆಯಡಿ 2008 ರಿಂದ 2011ರವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಖರ್ಚಾದ ಮೊತ್ತವೆಷ್ಟು; ಹಾಗೂ ಇನ್ನು ಮುಂದೆ ಕೈಗೊಳ್ಳಲಾಗುವ ಯೋಜನೆಗಳಾವುವು;

ಆ) ಹುಮ್ನಾಬಾದ್ ಮತಕ್ಷೇತ್ರದ ಎರಡು ಪುರಸಭೆಗಳಿರುವುದರಿಂದ ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಾಗುವುದೇ;

ಇ) ಹಾಗಿದ್ದಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು ಹಾಗೂ ಯಾವಾಗ? (ಮಾಹಿತಿ ನೀಡುವುದು)

ಶ್ರೀ ಬಾಲಚಂದ್ರ ಜಾರಕಿಹೋಳಿ:- (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):-

ಅ) ಹುಮ್ನಾಬಾದ್ ಮತ್ತು ಚಿಟಗುಪ್ಪಾ ಇವುಗಳಿಗೆ ಎಸ್‌ಎಫ್‌ಸಿ ಮುಕ್ತನಿಧಿ ಮತ್ತು 12ನೇ ಫೈನಾನ್ಸ್ ಯೋಜನೆಯಡಿ 2008 ರಿಂದ 2011ರವರೆಗೆ ಬಿಡುಗಡೆ ಮಾಡಲಾದ ಹಾಗೂ ಖರ್ಚಾದ ಅನುದಾನದ ವಿವರ ಈ ಕೆಳಗಿನಂತಿದೆ.

	ಬಿಡುಗಡೆ				ಖರ್ಚು			
	2008-09	2009-10	2010-11	2011-12	2008-09	2009-10	2010-11	2011-12
ಎಸ್‌ಎಫ್‌ಸಿ ಮುಕ್ತನಿಧಿ								
ಹುಮ್ನಾಬಾದ್	242.29	315.11	396.00	43.59	242.29	196.69	43.24	–
ಚಿಟಗುಪ್ಪಾ	216.68	281.87	290.36	38.99	201.17	148.57	10.50	–

	ಬಿಡುಗಡೆ		ಖರ್ಚು	
	2008-09	2009-10	2008-09	2009-10
12ನೇ ಹಣಕಾಸು ಯೋಜನೆ				
ಹುಮ್ನಾಬಾದ್	61.80	32.64	41.40	7.86
ಚಿಟಗುಪ್ಪಾ	19.54	11.68	9.47	4.36

ಆ) ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಅವ್ವಯಿಸುವುದಿಲ್ಲ.